UNIVERSITY LIBRARY
TUESDAY 05-08-2025
Agri Newspaper Clippings
For more information visit University Library Website
Web - uasbagrilibindia.org
E-mail- librarian@uasbangalore.edu.in

ಓ ಮೆಣಸೆ, ನೀನೆಷ್ಟು ಅಪಾಯಕಾರ

• ರವಿಭಾರತಿ ಗೋಸಾವಿ

ಯಾವುದೇ ಅಡುಗೆ ಮಾಡುವಾಗ ಹಸಿ ಮೆಣಸಿನ ಮೇಲೆ ನಮಗೆ ತುಸು ಹೆಚ್ಚೇ ಮನಸ್ಸು ಧಾರಾಳವಾಗಿ ಬಳಸುತ್ತಿರುತ್ತೇವೆ. ನೀರಿನಲ್ಲಿ ಅವನರಕ್ಕೆ ತೊಳೆದಂತೆ ಮಾಡಿ ಬಳಸುವವರು ಕೆಲವರು, ತೊಳೆಯದೆಯೇ ಹಾಗೆಯೇ ಕಚಕಚನೆ ಹೆಚ್ಚಿ ಬಳಸುವವರು ಹಲವರು. ಹೋಟೆಲ್‌ಗಳಲ್ಲಿ, ಬೀದಿ ಬದಿಯ ಗಾಡಿಗಳಲ್ಲೂ ಇದು ಪರಿಪಾಠ.



ಇಂತಿಪ್ಪ ಹಸಿಮೆಣಸಿನಕಾಯಿ ಕೂಡ ಅವೈಜ್ಞಾನಿಕ ಸಿಂಪಡಣೆಯ ಸಂತ್ರಸ್ತ. ಮೆಣಸಿಗೆ ಬಾಧಿಸುವ ರೋಗಗಳ ನಿಯಂತ್ರಣಕ್ಕಾಗಿ 2 ರಿಂದ 3 ಬಾರಿ ರಾಸಾಯನಿಕ ಸಿಂಪಡಿಸಲು ತಜ್ಞರ ಶಿಫಾರಸಿದೆ. ಆದರೆ ರೋಗ, ಕೀಟದಿಂದ ಬೆಳೆ ನಷ್ಟವಾಗದಿರಲಿ ಎಂದು ಸಾಮಾನ್ಯವಾಗಿ 8ರಿಂದ 10 ಬಾರಿ ಸಿಂಪಡಿಸಲಾಗುತ್ತದೆ.

ಹಸಿ ಮೆಣಸಿನ ಮೇಲೆ ಏನೆಲ್ಲ ರಾಸಾಯನಿಕ?

ಕೀಟ ನಿಯಂತ್ರಣಕ್ಕೆ ಸೈಯನ್ ಟ್ರಿನಿಲಿಪ್ರೋಲ್, ಡೈಮಿಯೋಥಿಯೇಟ್, ಡೈಕೋಫಾಲ್, ಪ್ರೋಪೇನೋಫಾಸ್, ಕ್ವಿನೋಮೆಥೋಯೇಟ್, ಸೈಯ್ಲೋಥ್ರಿನ್, ಸ್ಪೊಡೊಪ್ಟೆರಾ, ಲುಫೆನುರಾನ್, ಇಮಿಡಾಕ್ಲೊಪ್ರಿಡ್, ಥೈಮಿಥೋಯೇಟ್, ಕೊರ್ಯಾಜಿನ್, ಡೈಕೊಫಾಲ್, ಪೈಗಾಸಿನ್, ಡೈಕೊಫಾಲ್, ಫೋಪರ್, ಕ್ಲೊರ್ಫೆನ್ಯಾಪರ, ಪ್ರೋಫೆನೋಫಾಸ್, ಇಂಡಾಕ್ಸ್ ಕಾರ್ಬ್ ರಾಸಾಯನಿಕ ಸಿಂಪಡಿಸಲಾಗುತ್ತದೆ. ರೋಗ ನಿಯಂತ್ರಣಕ್ಕೆ ಮೆಟಾಲಾಕ್ಸಿಲ್ ಎಂ. ಝಿಡ್, ಕಾರ್ಬನ್ ಡೈಜಿಮ್, ಹೆಕ್ಸಾಕೋನಾಜೋಲ್, ಡೈಫೆನಾಕೊನಾಜೋಲ್, ಹೆಕ್ಸಾಕೋನಾಜೋಲ್, ಪ್ರೊಪಿಕೋನಾಜೋಲ್, ಅಜಾಕ್ಸಿಸ್ಟ್ರೋಬಿ ಇನ್ನಿತರ ರಾಸಾಯನಿಕ ಶಿಲಿಂಧ್ರ ನಾಶಕ ಸಿಂಪಡಿಸಲಾಗುತ್ತದೆ.



ಹಸಿಮೆಣಸು ಸವಿದರೆ...

ಜೀವಸತ್ವಹಾಗೂ ಪೋಷಕಾಂಶಗಳು, ವಿಟಮಿನ್ ಎ, ಸಿ ಮತ್ತು ಕೆ ಲಭ್ಯವಾಗುತ್ತವೆ. ಆ್ಯಂಟಿ ಆಕ್ಸಿಡೆಂಟ್‌ಗಳಿದ್ದು ಇವು ರೋಗ ನಿರೋಧಕ ಶಕ್ತಿ ಹೆಚ್ಚಿಸಲು ಪೂರಕ. ಮೆಣಸಿನ ಕಾಯಿಗೆ ಸಿಂಪಡಿಸಿದ ಪೀಡೆನಾಶಕಗಳ ಶೇಷ 10ರಿಂದ15 ದಿನಗಳ ಕಾಲ ಇರುತ್ತವೆ. ಮಾರುಕಟ್ಟೆಯಿಂದ ತಂದ ಮೆಣಸಿನಕಾಯಿಯನ್ನು ಮರೆಯದೇ ಉಗುರು ಬೆಚ್ಚಗಿನ ನೀರು ಅಥವಾ ಉಪ್ಪು ನೀರಿನಲ್ಲಿ ಸ್ವಚ್ಛವಾಗಿ ತೊಳೆದು ಸೇವಿಸುವುದು ಉತ್ತಮ.

ಮೆಣಸೊಳಗೆ ಎಷ್ಟು ದಿನ ಕೆಮಿಕಲ್ ಇರುತ್ತೆ?

ಮೆಣಸಿನ ಕಟಾವು ಹಂತದಲ್ಲೂ ಅಂತರ್‌ವ್ಯಾಪಿ ಪೀಡೆನಾಶಕ ಸಿಂಪಡಿಸಲಾಗುತ್ತದೆ. ಇಂಥ ಔಷಧಗಳ ರಾಸಾಯನಿಕ ನಮ್ಮ ಉದರ ಸೇರಿದರೆ, ಸರ ದೌರ್ಬಲ್ಯ, ಹೃದ್ರೋಗ ಬಾಧಿಸಬಹುದು.

- ಡಾ. ಶಿವಾನಂದ ಎಸ್. ಹಿರೇಮಠ ವಿಜ್ಞಾನಿ

ಐಸಿಎಆರ್ ಕೆವಿಕೆ-II ಕೃಷಿ ವಿಜ್ಞಾನ ಕೇಂದ್ರ, ಮತ್ತಿಕೊಪ್ಪ

ಕೃಷಿ ಅಧಿಕಾರಿಗಳ ನೇಮಕಾತಿ ಪರೀಕ್ಷೆ ಮುಂದೂಡಲು ಕೆಪಿಎಸ್‌ಸಿಗೆ ಖರ್ಗೆ ಪತ್ರ

ಸಂ.ಕ.ಸಮಾಚಾರ, ಬೆಂಗಳೂರು

ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಕ್ಕಾಗಿ ಸೆ.6 ಮತ್ತು 7ರಂದು ನಿಗದಿಯಾಗಿದ್ದ ಪರೀಕ್ಷೆಯನ್ನು ಮುಂದೂಡುವಂತೆ ಸಚಿವ ಪ್ರಿಯಾಂಕ್ ಖರ್ಗೆ ಕರ್ನಾಟಕ ಲೋಕ ಸೇವಾ ಆಯೋಗಕ್ಕೆ ಮನವಿ ಮಾಡಿದ್ದಾರೆ.



ಈ ಸಂಬಂಧ ಸೋಮವಾರ ಕರ್ನಾಟಕ ಲೋಕ ಸೇವ ಆಯೋಗದ ಕಾರ್ಯದರ್ಶಿಗಳಿಗೆ ಪತ್ರ ಬರೆದಿರುವ ಸಚಿವರು, ಅಭ್ಯರ್ಥಿಗಳಿಗೆ ಪರೀಕ್ಷೆಗೆ ತಯಾರಾಗಲು ಸಮಯ ತುಂಬಾ ಕಡಿಮೆ ಇರುವುದರಿಂದ ಪರೀಕ್ಷೆಗಳನ್ನು ಮುಂದೂಡಿ ಮರು ನಿಗದಿಪಡಿಸಬೇಕೆಂದು ಕೋರಿದ್ದಾರೆ.

ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿಗಳ ನೇಮಕಾತಿ ಪರೀಕ್ಷಾ ಪಠ್ಯಕ್ರಮವು ವಿಶಾಲ ಮತ್ತು ಸಮಗ್ರವಾಗಿದೆ. ಸಂಪೂರ್ಣ ತಯಾರಿಗಾಗಿ ಸಾಕಷ್ಟು ಸಮಯ ಬೇಕಾಗುತ್ತದೆ. ಕೆಲವರು ಆ.30ರಂದು ನಡೆಯಲಿರುವ ಬ್ಯಾಂಕಿಂಗ್ ಹಾಗೂ ಕೃಷಿ ಅಧಿಕಾರಿಗಳ ಪೂರ್ವಭಾವಿ ಪರೀಕ್ಷೆಗಳ ತಯಾರಿ ನಡೆಸುತ್ತಿದ್ದಾರೆ, ಇದರೊಟ್ಟಿಗೆ ಸೆ.2 ಹಾಗೂ 4ರಂದು ಕೃಷಿ ಸಂಶೋಧನ ಸೇವೆಗಾಗಿ ಮತ್ತು ಸೆ.2 ಮತ್ತು 3ರಂದು ಕೈಗಾರಿಕಾ ವಿಸ್ತರಣಾಧಿಕಾರಿ ಪರೀಕ್ಷೆಗಳೂ ನಿಗದಿಗೊಂಡಿವೆ ಎಂದು ಸವಿಸ್ತಾರವಾಗಿ ವಿವರಿಸಿರುವ ಪ್ರಿಯಾಂಕ್ ಖರ್ಗೆ ಅವರು, ಈ ಹಿನ್ನೆಲೆಯಲ್ಲಿ ಕೃಷಿ ಅಧಿಕಾರಿ ಮತ್ತು ಸಹಾಯಕ ಕೃಷಿ ಅಧಿಕಾರಿ (ಕಲ್ಯಾಣ ಕರ್ನಾಟಕ) ಪರೀಕ್ಷೆಗಳ ಆಕಾಂಕ್ಷಿಗಳ ಭವಿಷ್ಯದ ಹಿತದೃಷ್ಟಿಯಿಂದ ಪರೀಕ್ಷೆಯನ್ನು ಅಕ್ಟೋಬರ್ ತಿಂಗಳಿನಲ್ಲಿ ಮರು ನಿಗದಿಪಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಕೆಪಿಎಸ್‌ಸಿಗೆ ಮನವಿ ಮಾಡಿದ್ದಾರೆ.

S-karnataka pg 04

V-karnataka pg 08

ಮೊದಲ ಸುತ್ತಿನಲ್ಲೇ 1.09 ಲಕ್ಷ ಸೀಟು ಆಯ್ಕೆ

ಸಿಇಟಿ: 80% ಸೀಟು ಹಂಚಿಕೆ

ಪ್ರಮುಖ ಕೋರ್ಸ್‌ಗಳ ಮಾಹಿತಿ

ಕೋರ್ಸ್	ಸೀಟು ಲಭ್ಯ	ಭರ್ತಿ	ಉಳಿಕೆ
ಎಂಜಿನಿಯರಿಂಗ್	77,140	71,813	5,327
ನರ್ಸಿಂಗ್	31,726	15,186	16,540
ಮೆಡಿಕಲ್	9,263	8,321	942
ಡೆಂಟಲ್	2,619	2,137	482
ಕೃಷಿ	1,393	1,182	211



■ **ದೇವರಾಜ್ ಕನಕಪುರ** ಬೆಂಗಳೂರು / devaraj.l@timesofindia.com

ಸಾಮಾನ್ಯ ಪ್ರವೇಶ ಪರೀಕ್ಷೆಯ(ಸಿಇಟಿ) ಮೊದಲ ಸುತ್ತಿನಲ್ಲೇ ಶೇ. 80ರಷ್ಟು ಸೀಟುಗಳು ವಿದ್ಯಾರ್ಥಿಗಳಿಗೆ ಹಂಚಿಕೆಯಾಗಿವೆ. ಎಂಜಿನಿಯರಿಂಗ್, ವೈದ್ಯಕೀಯ, ಕೃಷಿ ಹಾಗೂ ನರ್ಸಿಂಗ್ ಕೋರ್ಸ್‌ಗಳಿಗೆ ಹೆಚ್ಚಿನ ಬೇಡಿಕೆ ಸೃಷ್ಟಿಯಾಗಿದೆ.

ಕೃಷಿ ಕೋರ್ಸ್‌ಗಳಲ್ಲಿ ಲಭ್ಯವಿದ್ದ ಸಂಪೂರ್ಣ ಸೀಟುಗಳು ಹಂಚಿಕೆಯಾಗಿವೆ.

V-karnataka pg 01

Kannadaprabha pg 08

ಕೈ ಹಿಡಿದ ಗೋಧಿ | ಬೀದರ್‌ನಲ್ಲಿ ಕಿರಾಣಿ ಅಂಗಡಿ ನಡೆಸುತ್ತಿದ್ದ ಧನರಾಜ್ | ಅಂಗಡಿಗೆ ಬೇಕಾದ ಗೋಧಿ ಹಿಟ್ಟು ಸರಬರಾಜಿನಲ್ಲಿ ವ್ಯತ್ಯಯದಿಂದ ಉದ್ಯಮ ಆರಂಭ | ನಂದಿ ಬ್ರ್ಯಾಂಡ್‌ಗೆ ಕಪೆಕ್ ಸಾಥ್

ಸರಬರಾಜಿಲ್ಲದ್ದೇ ಉದ್ಯಮಕ್ಕೆ ಪ್ರೇರಣೆಯಾಯ್ತು ಗೋಧಿ ಹಿಟ್ಟು!

ಬೀದರ್‌ನಗರದಲ್ಲಿ ಚಿಕ್ಕ ಕಿರಾಣಿ ಅಂಗಡಿ ನಡೆಸುತ್ತಿದ್ದರು ಧನರಾಜ್. ಕಿರಾಣಿ ಅಂಗಡಿಗೆ ಬೇಕಾದ ಸಾಮಾನುಗಳ ಪೈಕಿ ಗೋಧಿ ಹಿಟ್ಟು ಇತ್ತು. ಆದರೆ, ಅದನ್ನು ಸರಬರಾಜು ಮಾಡುವವ ಕೇಳಿದಷ್ಟು ಹಿಟ್ಟು ಕೊಡುತ್ತಿರಲಿಲ್ಲ. ಐದು ಕೇಜಿ ಕೇಳಿದರೆ ಮೂರು ಕೇಜಿ ಕೊಡುತ್ತಿದ್ದ. ಇದಕ್ಕೆ ಇಷ್ಟು ಡಿಮ್ಯಾಂಡ್ ಇರೋದಾದರೆ ತಾನೇ ಅದನ್ನು ಮಾಡಬಾರದೇಕೆ ಎಂಬ ಪ್ರಶ್ನೆ ಹಾಕಿಕೊಂಡ ಧನರಾಜ್ ಬೆಂಬಲಕ್ಕೆ ಬಂದಿದ್ದು ಕರ್ನಾಟಕ ಕೃಷ ಉತ್ಪನ್ನ ಸಂಸ್ಕರಣೆ ಮತ್ತು ರಫ್ತು ನಿಗಮ ಹಾಗೂ ಪಿಎಂಎಫ್‌ಎಂಇ ಸಾಲ ಯೋಜನೆ.

ಪಕ್ಕದ ರಾಜ್ಯಗಳಲ್ಲೂ ಬೇಡಿಕೆ: ಈಗ ಧನರಾಜ್ ಆ ಕಿರಾಣಿ ಅಂಗಡಿ ಮುಚ್ಚಿದ್ದಾರೆ. ಶ್ರೀಯಾಂಶ್ ಆಗ್ರೋ ಪ್ರಾಡಕ್ಟ್ಸ್ ಕಂಪನಿ ಸ್ಥಾಪಿಸಿ ಆದರ ಮೂಲಕ ನಂದಿ ಬ್ರ್ಯಾಂಡಿನ ಗೋಧಿ ಹಿಟ್ಟು ಉತ್ಪಾದಿಸುತ್ತಿದ್ದಾರೆ. ಪ್ರತಿ ತಿಂಗಳು 150 ರಿಂದ 180 ಟನ್ ಗೋಧಿ ಹಿಟ್ಟು ತಯಾರಿಸಿ ಮಾರುತ್ತಿದ್ದಾರೆ. 1 ಕೇಜಿ ಮತ್ತು 5 ಕೇಜಿ ಪ್ಯಾಕುಗಳಲ್ಲಿ ಮಾರಾಟವಾಗುವ ನಂದಿ ಗೋಧಿಹಿಟ್ಟಿಗೆ ಬೀದರ್‌ಪಕ್ಕದಆಂಧ್ರಪ್ರದೇಶದ ಜಿಲ್ಲೆಯಾದ ಜಹೀರಾಬಾದ್, ಮಹಾರಾಷ್ಟ್ರದ ಜಿಲ್ಲೆಗಳಲ್ಲೂ ಬೇಡಿಕೆ ಸೃಷ್ಟಿಸಿಕೊಂಡಿದೆ. ಕಳೆದ ವರ್ಷ ₹2 ಕೋಟಿ ರುಪಾಯಿವರೆಗೂ ವಹಿವಾಟು ನಡೆಸಿರುವ ನಂದಿ ಗೋಧಿ ಹಿಟ್ಟು ಈ ಬಾರಿ ₹2 ಕೋಟಿ ರೂಪಾಯಿ ದಾಟಲಿದೆ.



2ವರ್ಷದಹಿಂದೆಮೊದಲಿಗೆ ಕಪೆಕ್ ಮೂಲಕ ಪಿಎಂಎಫ್ ಎಂಇ ಯೋಜನೆಯ ₹10 ಲಕ್ಷ ರುಪಾಯಿ ಸಾಲ ಪಡೆದು ಉದ್ಯಮ ಆರಂಭಿಸಿದರು. ಆದಾದನಂತರ ಆಗತ್ಯಕ್ಕೆತಕ್ಕಂತೆ ಈವರೆಗೆ ₹40 ಲಕ್ಷ ರು.ಗೂ ಹೆಚ್ಚು ಬಂಡವಾಳ ಹಾಕಿರುವ ಧನರಾಜ್, ಸಾಂಪ್ರದಾಯಿಕ ಶೈಲಿಯಲ್ಲೇ ಮಾರ್ಕೆಟಿಂಗ್ ನಡೆಸುತ್ತಿದ್ದಾರೆ. ಬೀದರ್, ಹುಮನಾಬಾದ್, ಕಲಬುರಗಿ, ಜಹೀರಾಬಾದ್ ಹಾಗೂ ಮಹಾರಾಷ್ಟ್ರದ ಉದ್ಗೀರ್‌ನಲ್ಲಿ ಡಿಸ್ಟ್ರಿಬ್ಯೂಟರ್‌ಗಳನ್ನು ನೇಮಿಸಿಕೊಂಡು ವ್ಯಾಪಾರ ಮಾಡುತ್ತಿದ್ದಾರೆ. ಮುಂದಿನಒಂದುವರ್ಷದಲ್ಲಿ ಹೈದ್ರಾಬಾದ್‌ಕರ್ನಾಟಕದಎಲ್ಲಾಜಿಲ್ಲೆಗಳಲ್ಲೂ ಡಿಸ್ಟ್ರಿಬ್ಯೂಟರ್ ನೇಮಿಸುವ ಉದ್ದೇಶವಿದೆ. ಆದಕ್ಕೂ ಮೊದಲು ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳಲು ಸಿದ್ಧತೆನಡೆಸಿದ್ದಾರೆ. ಯಾವುದೇ ಆನ್‌ಲೈನ್ ಮಾರ್ಕೆಟಿಂಗ್ ವ್ಯವಹಾರ ಇವರದು ಇಲ್ಲ.



ಗೋಧಿ ಹಿಟ್ಟಲ್ಲೇ ಬ್ರ್ಯಾಂಡ್ ಆಗುವೆ: ಮೂಲತಃ ರೈತ ಕುಟುಂಬದ ಧನರಾಜ್ ಅವರ ಕುಟುಂಬ ಸದ್ಯರು ಈಗಲೂ ಕೃಷಿ ನಡೆಸುತ್ತಾರೆ. ಜೋಳ ಮತ್ತಿತರ ಧಾನ್ಯ ಬೆಳೆದರೂ ಗೋಧಿ ಹಿಟ್ಟು ಮಾತ್ರ ತಯಾರಿಸುತ್ತಾರೆ. ಬೀದರ್‌ನಲ್ಲಿಗೋಧಿ ಬೆಳೆಯೋರೈತರಿಂದಲೂ ಗೋಧಿ ಖರೀದಿಸುವ ಧನರಾಜ್, ಹೆಚ್ಚಾಗಿ ಗೋಧಿಯನ್ನು ಮಧ್ಯಪ್ರದೇಶದಿಂದ ಖರೀದಿಸುತ್ತಾರೆ. ಬಹು ಧಾನ್ಯ ಹಿಟ್ಟು ಕಡ್ಲೆಹಿಟ್ಟು ತಯಾರಿಸುವ ಆಲೋಚನೆ ಇದೆ. ಆದರೆ, ಗೋಧಿ ಹಿಟ್ಟಿನಲ್ಲೇ ನಾವು ಬ್ರ್ಯಾಂಡ್ ಆಗಬೇಕು. ಜನಪ್ರಿಯ ಆಗಬೇಕು ಎನ್ನೋದು ನಮ್ಮ ಉದ್ದೇಶ. ಉತ್ತಮ ಗೋಧಿ ಹಿಟ್ಟಿಗೆ ನಂದಿ ಬ್ರ್ಯಾಂಡ್ ಹೆಸರಾಗಬೇಕು. ಆದಾಗೋವರೆಗೂ ಬೇರೆ ಯೋಚನೆ ಇಲ್ಲ ಎಂದು ಸ್ಪಷ್ಟ ಮಾತುಗಳಲ್ಲಿ ತಮ್ಮ ಉದ್ಯಮದ ಪಾಠ ವಿವರಿಸಿದರು ಧನರಾಜ್.

ಸಗಟು ವ್ಯಾಪಾರದಲ್ಲೂ ನಾವು ಮುಂದಿದ್ದೇವೆ. 30 ಕೇಜಿ ಬ್ಯಾಗ್‌ನಲ್ಲೂ ಗೋಧಿ ಹಿಟ್ಟು ಸಿಗುತ್ತದೆ. 7 ಜನರಿಗೆ ನೇರ ಉದ್ಯೋಗ ನೀಡಿದ್ದೇನೆ. 5 ಡಿಸ್ಟ್ರಿಬ್ಯೂಟರ್‌ಗಳಿಗೂ ಇದರಿಂದ ವ್ಯವಹಾರ ಸಿಕ್ಕಿದೆ. ಜಿಲ್ಲೆಯಲ್ಲೂಡಿಸ್ಟ್ರಿಬ್ಯೂಟರ್ ನೇಮಕವಾದರೆ ಹೆಚ್ಚಿನ್ನು ಉದ್ಯೋಗ ನೀಡಿದಂತೆಯೂ ಆಗುತ್ತದೆ. ಪೋರ್ಟಫೈಡ್ ಸರ್ಟಿಫಿಕೇಟ್ ಕೂಡ ಪಡೆದಿದ್ದೇವೆ. ಬೀದರ್‌ನ ಗಾಂಧಿಗಂಜ್‌ನಲ್ಲಿ ಒಂದು ಔಟ್ಲೆಟ್ ಆರಂಭಿಸುವ ಯೋಜನೆ ಇದೆ. ಸ್ಥಳೀಯ ಮಾರ್ಕೆಟ್‌ನಲ್ಲಿ ಹೆಸರು ಮಾಡಿದ ಮೇಲೆ ಉಳಿದದ್ದು ತಾನಾಗಿಯೇ ಬರುತ್ತದೆ. ಕೇವಲ ಎರಡು ವರ್ಷದಲ್ಲಿ ಇಷ್ಟು ಆಗಿದೆ ಎಂದು ಖುಷಿ ಹಂಚಿಕೊಂಡರು ಧನರಾಜ್.

ವ್ಯಾಪಾರ ವಿಸ್ತರಣೆ: ನಾವು ಕೇಳಿದಷ್ಟು ಸಬ್ಸಿಡಿ ಸಿಕ್ಕಿದ್ದರೆ ಈ ಯೋಚನೆಯೇ ನಮಗೆ ಬರುತ್ತಿರಲಿಲ್ಲ. ಇದನ್ನು ಶುರು ಮಾಡಿಕ್ಕೆ ಹಿಡಿಯೋ ತನಕ ತಂದೆ ಕಿರಾಣಿ ಅಂಗಡಿ ನೋಡಿಕೊಂಡರು. ದಿನಕ್ಕೆ ಐದು ಸಾವಿರ ವ್ಯಾಪಾರ ಆದರೆ ದೊಡ್ಡದಿತ್ತು. ಈಗ ಅದನ್ನು ಮುಚ್ಚಿ ಸಂಪೂರ್ಣವಾಗಿ ಗೋಧಿ ಹಿಟ್ಟಿನ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದೇವೆ. ನಮ್ಮ ವ್ಯಾಪಾರ ಏಸ್ತರಣೆಗೆ ದೊಡ್ಡ ಮೊತ್ತದ ಸಾಲದ ಅಗತ್ಯ ಈಗ ಕಾಣ್ತಿದೆ. ಅದೂ ಕೂಡ ಸಿಗಬಹುದು ಎಂದು ಆಶಾಭಾವನೆ ವ್ಯಕ್ತಪಡಿಸಿದರು ಧನರಾಜ್.

15 ಲಕ್ಷ ರು.ಸಬ್ಸಿಡಿ ಪಡೆಯಿರಿ

ಕೆರು ಆಹಾರಸಂಸ್ಕರಣಾ ಉದ್ಯಮಗಳಿಗೆ ರಾಜ್ಯ ಸರ್ಕಾರ 9 ಲಕ್ಷ ಹಾಗೂ ಕೇಂದ್ರ ಸರ್ಕಾರ 6 ಲಕ್ಷ ಸೇರಿ ಒಟ್ಟು 15 ಲಕ್ಷ ರು. ವರೆಗೂ ಸಹಾಯಧನ ದೊರೆಯಲಿದೆ. ಹೊಸ ಉದ್ಯಮ ಅಥವಾ ಉದ್ಯಮ ವಿಸ್ತರಣೆಗೂ ಯೋಜನೆಯಲ್ಲಿ ಅವಕಾಶ ವಿದೆ. ಬೆಲ್ಲ ತಯಾರಿಕೆ ಸೇರಿದಂತೆ 200ಕ್ಕೂ ಹೆಚ್ಚು ಉತ್ಪನ್ನಗಳು ಲಾಭ ಪಡೆಯಬಹುದು. ಆಹಾರ ಉದ್ಯಮಿಗಳಾಗಲು ಸಾಲ ಸಬ್ಸಿಡಿ ಪಡೆಯಲು ಹಾಗೂ ಮತ್ತಿತರ ವಿವರಗಳಿಗಾಗಿ ಕಪೆಕ್ ಹೆಲ್ಪ್‌ಲೈನ್ ಸಂಪರ್ಕಿಸಿ - 080 - 22271192 & 22271193. ಕೆಲಸದ ದಿನಗಳಂದು ಬೆಳಿಗ್ಗೆ 10.30 ರಿಂದ ಸಂಜೆ 4ರವರೆಗೆ ಸಂಪರ್ಕಿಸಿ. www.kappec.karnataka.gov.in ನಲ್ಲೂ ಲಭ್ಯ.

ಸುಸ್ಥಿರ ನಾಳೆಗೆ ಜೈವಿಕ ಇಂಧನ



ವಿಶ್ಲೇಷಣೆ

ಗುರುರಾಜ ಎಸ್. ದಾವಣಗೆರೆ

ಪಳೆಯುಳಿಕೆ ಇಂಧನದ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಶುದ್ಧ ಮತ್ತು ನವೀಕರಿಸಬಹುದಾದ ಇಂಧನದ ಬಳಕೆಯ ಮಾತು ಬಂದಾಗಲೆಲ್ಲ 'ಜೈವಿಕ ಇಂಧನ' ನೆನಪಾಗುತ್ತದೆ. 19ನೇ ಶತಮಾನದ ಕೊನೆಯ ವೇಳೆಗೆ ಜರ್ಮನ್ ಸಂಶೋಧಕ ಸರ್ ರುಡಾಲ್ಫ್ ಡೀಸೆಲ್, ಕಡಲೆಕಾಯಿ ಎಣ್ಣೆಯನ್ನು ಬಳಸಿ ಡೀಸೆಲ್ ಎಂಜಿನ್ ಅನ್ನು ಯಶಸ್ವಿಯಾಗಿ ಚಲಾಯಿಸಿ ತೋರಿಸಿದ್ದರು. ಅದು ಪರ್ಯಾಯ ಇಂಧನಗಳ ಸಾಧ್ಯತೆಗಳನ್ನು ಜಗತ್ತಿಗೆ ಪರಿಚಯಿಸಿತ್ತು. ಆ ಮಹತ್ವದ ಘಟನೆಯು ಅಚ್ಚರಿ ಹುಟ್ಟಿಸುವುದರ ಜೊತೆಗೆ ಭವಿಷ್ಯದ ಇಂಧನ ಮೂಲಗಳ ಕುರಿತು ಹೊಸ ದೃಷ್ಟಿಕೋನವನ್ನೇ ನೀಡಿತು. ಕೆಲವು ದೇಶಗಳಲ್ಲಿ ಜೈವಿಕ ಇಂಧನ ತಯಾರಿಕೆ ಮತ್ತು ಬಳಕೆ ಕುರಿತು ಸಂಶೋಧನೆ ಮತ್ತು ಅಭಿವೃದ್ಧಿ ಕೆಲಸಗಳು ಶುರುವಾದವು.

ಸಸ್ಯಗಳು, ಪ್ರಾಣಿಗಳ ಕೊಬ್ಬು, ಕೃಷಿ ತ್ಯಾಜ್ಯ, ಸಕ್ಕರೆ ಕಾರ್ಖಾನೆಗಳ ಉಪ ಉತ್ಪನ್ನಗಳು ಮತ್ತು ಪಾಚಿಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸಲಾಗುತ್ತದೆ. ಜೈವಿಕ ಇಂಧನ ತಯಾರಿಕೆಯ ಪ್ರಕ್ರಿಯೆ ಸಂಕೀರ್ಣವಾದರೂ ಪರಿಣಾಮಕಾರಿ. ಜೈವಿಕ ಡೀಸೆಲ್ ತಯಾರಿಕೆಗೆ ಬಳಸುವ ಹೊಂಗೆ, ಹಿಪ್ಪೆ, ಬೇವಿನ ಎಣ್ಣೆ ಅಥವಾ ಬಳಸಿದ ಅಡುಗೆ ಎಣ್ಣೆಯನ್ನು 'ಟ್ರಾನ್ಸ್‌ಎಸ್ಟರಿಫಿಕೇಷನ್' (ಪರ್ಯಾಂತರೀಕರಣ) ರಾಸಾಯನಿಕ ಪ್ರಕ್ರಿಯೆ ಮೂಲಕ ಪರಿವರ್ತಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ತೈಲವನ್ನು ಆಲ್ಕೋಹಾಲ್ ಜೊತೆ ಸಂಯೋಜಿಸಿ, ಗ್ಲಿಸರಿನ್ ಬೇರ್ಪಡಿಸಿ, ಶುದ್ಧ ಜೈವಿಕ ಡೀಸೆಲ್ ಪಡೆಯಲಾಗುತ್ತದೆ. ಇದನ್ನು ಪೆಟ್ರೋಲಿಯಂ, ಡೀಸೆಲ್ ಜೊತೆ ಮಿಶ್ರಣ ಮಾಡಿ ವಾಹನಗಳಲ್ಲಿ ಬಳಸಬಹುದು. ಅದೇ ರೀತಿ, ಜೈವಿಕ ಎಥೆನಾಲ್ ತಯಾರಿಕೆಗೆ ಕಬ್ಬು, ಜೋಳ, ಬೀಟ್‌ರೂಟ್ ಮತ್ತು ಬಾರ್ಲಿಯಂತಹ ಸಕ್ಕರೆ ಅಂಶ ಹೆಚ್ಚಿರುವ ಬೆಳೆಗಳನ್ನು ಹುದುಗು ಬರುವ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಯೀಸ್ಟ್‌ಗಳು ಸಕ್ಕರೆಯನ್ನು ಎಥೆನಾಲ್ ಆಗಿ ಪರಿವರ್ತಿಸುತ್ತವೆ. ನಂತರ ಅದನ್ನು ಶುದ್ಧೀಕರಿಸಿ ಪೆಟ್ರೋಲ್ ಜೊತೆ ಮಿಶ್ರಣ ಮಾಡಿ ಬಳಸಲಾಗುತ್ತದೆ.

ಜೈವಿಕ ಇಂಧನಗಳ ಬಳಕೆಯಿಂದ ಪರಿಸರದ ಮೇಲೆ ಗಂಭೀರವಾದ ಅಡ್ಡ ಪರಿಣಾಮಗಳಾಗುವುದಿಲ್ಲ. ಪಳೆಯುಳಿಕೆ ಇಂಧನಗಳು ಇಂಗಾಲದ ಡೈಆಕ್ಸೈಡ್ ಅನ್ನು ವಾತಾವರಣಕ್ಕೆ ಸೇರಿಸುವ ಮೂಲಕ ಶಾಖವರ್ಧಕ ಅನಿಲಗಳ ಪ್ರಮಾಣವನ್ನು ಹೆಚ್ಚಿಸಿದರೆ, ಜೈವಿಕ ಇಂಧನಗಳನ್ನು ಉತ್ಪಾದಿಸುವ ಸಸ್ಯಗಳು ತಮ್ಮ ಬೆಳವಣಿಗೆ ಸಮಯದಲ್ಲಿ ವಾತಾವರಣದಿಂದ ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುತ್ತವೆ. ಇದು ಇಂಗಾಲದ ಚಕ್ರವನ್ನು ಸಮತೋಲನದಲ್ಲಿ ಇಡಲು ಮತ್ತು ಒಟ್ಟು ಇಂಗಾಲದ ಹೊರಸೂಸುವಿಕೆ ಕಡಿಮೆಯಾಗಲು ಸಹಕಾರಿ. ಇದರ ಜೊತೆಗೆ, ಜೈವಿಕ ಇಂಧನಗಳಲ್ಲಿ ಗಂಧಕ ಮತ್ತು ಇತರೆ ವಿಷಕಾರಿ ರಾಸಾಯನಿಕಗಳ ಪ್ರಮಾಣ ಬಹಳ ಕಡಿಮೆ ಇರುತ್ತದೆ. ಇದರಿಂದಾಗಿ, ವಾಯುಮಾಲಿನ್ಯ ಗಣನೀಯವಾಗಿ ಕಡಿಮೆಯಾಗುತ್ತದೆ. ಜೈವಿಕ ಇಂಧನ ಬಳಕೆಯಾದಾಗ ಅಪಾಯಕಾರಿ ತ್ಯಾಜ್ಯಗಳ ಮತ್ತು ನೈಟ್ರಸ್ ಆಕ್ಸೈಡ್‌ಗಳ ಹೊರಸೂಸುವಿಕೆಯು, ಪಳೆಯುಳಿಕೆ ಇಂಧನಗಳು ಹೊಮ್ಮಿಸುವುದಕ್ಕಿಂತ ಹಲವು ಪಟ್ಟು ಕಡಿಮೆ ಇರುತ್ತದೆ.

ಜೈವಿಕ ಇಂಧನ ಕ್ಷೇತ್ರದಲ್ಲಿನ ಹೂಡಿಕೆಯು ಆರ್ಥಿಕತೆ, ಇಂಧನ ಭದ್ರತೆ ಮತ್ತು ಸುಸ್ಥಿರ ಅಭಿವೃದ್ಧಿ ದೃಷ್ಟಿಯಿಂದ ಮಹತ್ವದ ಪಾತ್ರ ವಹಿಸುತ್ತಿದೆ. ಈ ಇಂಧನಗಳು ಪಳೆಯುಳಿಕೆ ಇಂಧನಗಳ ಆಮದನ್ನು ಕಡಿಮೆ ಮಾಡಲು ಸಹಾಯ ಮಾಡುವುದರಿಂದ ವಿದೇಶಿ ವಿನಿಮಯದ ಉಳಿತಾಯವಾಗುತ್ತದೆ.

ಕಬ್ಬಿನಿಂದ ತಯಾರಾದ ಎಥೆನಾಲ್ ಅನ್ನು ಬ್ರೆಜಿಲ್ ತನ್ನ ಆರ್ಥಿಕತೆಯ ಪ್ರಮುಖ ಭಾಗವನ್ನಾಗಿ ಮಾಡಿಕೊಂಡಿದೆ. ಅಲ್ಲಿನ ಬಹುತೇಕ ವಾಹನಗಳು 'ಫ್ಲೆಕ್ಸ್ ಫ್ಯೂಯಲ್' ಎಂಜಿನ್‌ಗಳನ್ನು ಹೊಂದಿದ್ದು, ಎಥೆನಾಲ್ ಅಥವಾ ಪೆಟ್ರೋಲ್ ಬಳಸುವ ಸಾಮರ್ಥ್ಯವನ್ನು ಹೊಂದಿವೆ. ಅಮೆರಿಕವು ಜೋಳವನ್ನು ಮುಖ್ಯ ಮೂಲವನ್ನಾಗಿ ಬಳಸಿಕೊಂಡು ಎಥೆನಾಲ್ ಉತ್ಪಾದನೆಯಲ್ಲಿ ವಿಶ್ವದಲ್ಲಿಯೇ ಮುಂಚೂಣಿಯಲ್ಲಿದೆ. ಯುರೋಪಿಯನ್ ಒಕ್ಕೂಟವು ಕಟ್ಟುನಿಟ್ಟಾದ ನೀತಿಗಳ ಮೂಲಕ ಜೈವಿಕ ಇಂಧನ ಬಳಕೆಯನ್ನು ಉತ್ತೇಜಿಸುತ್ತಿದೆ. ಈ ಬೆಳವಣಿಗೆಗಳು ಜೈವಿಕ ಇಂಧನಗಳು ಪರಿಸರಸ್ನೇಹಿ ಆಯ್ಕೆಯಷ್ಟೇ ಅಲ್ಲ, ಭವಿಷ್ಯದ ಆರ್ಥಿಕತೆಯ ನಿರ್ಣಾಯಕ ಭಾಗವೂ ಆಗಿವೆ ಎಂಬುದನ್ನು ತೋರಿಸುತ್ತವೆ.

ಜೈವಿಕ ಇಂಧನ ಕ್ಷೇತ್ರದಲ್ಲಿ ಭಾರತ ಮಹತ್ವದ ಹೆಜ್ಜೆಗಳನ್ನು ಇಟ್ಟಿದೆ. 2018ರಲ್ಲಿ ಜಾರಿಗೆ ತಂದ 'ಜೈವಿಕ ಇಂಧನಗಳ ರಾಷ್ಟ್ರೀಯ ನೀತಿ' ಅಡಿಯಲ್ಲಿ, ಪೆಟ್ರೋಲ್‌ನಲ್ಲಿ ಎಥೆನಾಲ್ ಮಿಶ್ರಣದ ಪ್ರಮಾಣವನ್ನು ಹೆಚ್ಚಿಸುವ ಗುರಿ ನಿಗದಿಪಡಿಸಲಾಗಿದೆ. ಆರಂಭದಲ್ಲಿ ಶೇ 10ರ ಮಿಶ್ರಣದ ಗುರಿ ಹೊಂದಿದ್ದರೂ, ಅದನ್ನು ಶೇ 20ಕ್ಕೆ ಹೆಚ್ಚಿಸುವ ಮಹತ್ವಾಕಾಂಕ್ಷೆಯ ಯೋಜನೆ ರೂಪಿಸಲಾಗಿದೆ. ಈ ಕಾರ್ಯಕ್ರಮ ಯಶಸ್ವಿಯಾಗಿ ಜಾರಿಯಲ್ಲಿದ್ದು, ತೈಲ ಆಮದು ವೆಚ್ಚ ಕಡಿಮೆಯಾಗಲು ಸಹಾಯ ಮಾಡುತ್ತಿದೆ. ಇದಲ್ಲದೆ, ಅಡುಗೆಗೆ ಬಳಕೆಯಾದ ಎಣ್ಣೆಯಿಂದ ಮತ್ತು ಹೊಂಗೆ, ಹಿಪ್ಪೆಗಳಿಂದ ಜೈವಿಕ ಡೀಸೆಲ್ ಉತ್ಪಾದನೆಗೆ ಒತ್ತು ನೀಡಲಾಗಿದೆ. ಅನೇಕ ರಾಜ್ಯಗಳಲ್ಲಿ ಜೈವಿಕ ಡೀಸೆಲ್ ಉತ್ಪಾದನಾ ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. ಕರ್ನಾಟಕವು 'ಜೈವಿಕ ಇಂಧನ ಅಭಿವೃದ್ಧಿ ಮಂಡಳಿ'ಯನ್ನು ರಚಿಸಿದ ಮೊದಲ ರಾಜ್ಯವಾಗಿದೆ. ಜೈವಿಕ ಇಂಧನಗಳ ಅಭಿವೃದ್ಧಿಯು ದೇಶದ ಆರ್ಥಿಕತೆಗೆ ಲಾಭ ತರುವುದಲ್ಲದೆ, ಕೃಷಿ ವಲಯದಲ್ಲಿ ಹೆಚ್ಚುವರಿ ಆದಾಯದ ಮೂಲವನ್ನು ಸೃಷ್ಟಿಸುವ ಸಾಧ್ಯತೆಗಳಿವೆ.

ಆಹಾರ ಬೆಳೆಗಳನ್ನು ಜೈವಿಕ ಇಂಧನ ಉತ್ಪಾದನೆಗಾಗಿ ಬಳಸುವುದು ಸರಿಯೇ ಎಂಬ ಪ್ರಶ್ನೆ ಮೊದಲಿನಿಂದಲೂ ಇದೆ. ಆಹಾರ ಬೆಳೆಗಳನ್ನು ಜೈವಿಕ ಇಂಧನಕ್ಕಾಗಿ ಬಳಸುವುದರಿಂದ ರೈತರಿಗೆ ಉತ್ತಮ ಬೆಲೆ ಸಿಗುತ್ತದೆ. ಅದರಿಂದಾಗಿ, ಕೃಷಿ ಕ್ಷೇತ್ರದ ಆರ್ಥಿಕತೆ ಸುಧಾರಿಸುತ್ತದೆ ಮತ್ತು ಮಾರಾಟವಾಗದ ಹೆಚ್ಚುವರಿ ಕೃಷಿ ಉತ್ಪನ್ನಗಳು ವ್ಯರ್ಥವಾಗುವುದು ತಪ್ಪುತ್ತದೆ. ಆದರೆ, ಆಹಾರ ಬೆಳೆಗಳನ್ನು ದೊಡ್ಡ ಪ್ರಮಾಣದಲ್ಲಿ ಜೈವಿಕ ಇಂಧನಕ್ಕಾಗಿ ಬಳಸಿದರೆ ಆಹಾರದ ಬೆಲೆಗಳು ಹೆಚ್ಚಾಗಿ, ಬಡ ದೇಶಗಳಲ್ಲಿ ಆಹಾರ ಭದ್ರತೆಗೆ ಅಪಾಯ ತರುವ ಸಾಧ್ಯತೆ ಇದೆ. ಜಾಗತಿಕವಾಗಿಯೂ ಆಹಾರದ ಕೊರತೆ ಉಂಟಾಗಬಹುದು. ಈ ಸಮಸ್ಯೆ ಪರಿಹರಿಸಿಕೊಳ್ಳಲು ಜನ- ಜಾನುವಾರು ಸೇವಿಸುವ ಆಹಾರಕ್ಕೆ ಪೈಪೋಟಿ ನೀಡದ ಬೆಳೆಗಳಿಂದ ಜೈವಿಕ ಇಂಧನಗಳನ್ನು ಉತ್ಪಾದಿಸುವುದು ಸೂಕ್ತ. ಹೊಂಗೆ, ಹಿಪ್ಪೆ, ಜಟ್ರೋಫಾದಂತಹ ಕೃಷಿಯೇತರ ಬೆಳೆಗಳು, ಪಾಚಿ, ವ್ಯರ್ಥ ಆಹಾರ, ಅವಧಿ ಮೀರಿದ ಪ್ಯಾಕ್ ಮಾಡಿದ ಆಹಾರ, ಕೃಷಿ ತ್ಯಾಜ್ಯ ಮತ್ತು ನಗರ ತ್ಯಾಜ್ಯಗಳನ್ನು ಜೈವಿಕ ಇಂಧನ ಉತ್ಪಾದಿಸಲು ಬಳಸುವುದರಿಂದ ಆಹಾರ ಭದ್ರತೆಗೆ ಧಕ್ಕೆಯಾಗುವುದಿಲ್ಲ ಮತ್ತು ಪರಿಸರಕ್ಕೂ ಹಾನಿ ಇರುವುದಿಲ್ಲ. ಭಾರತವು ಈ ನಿಟ್ಟಿನಲ್ಲಿ ಸುಧಾರಿತ ನೀತಿಗಳನ್ನು ಅಳವಡಿಸಿಕೊಂಡು ಮುನ್ನಡೆಯುತ್ತಿರುವುದು, 2070ರ ವೇಳೆಗೆ ಶೂನ್ಯ ಇಂಗಾಲ ಉತ್ಪರ್ಜನೆಯ ಗುರಿ ತಲುಪಲು ನೆರವಾಗಲಿದೆ.

> ಭವಿಷ್ಯದ ಇಂಧನ ಎಂದೇ ಪ್ರಸಿದ್ಧಿಯಾಗಿರುವ 'ಜೈವಿಕ ಇಂಧನ' ಪರಿಸರಕ್ಕೆ ಪೂರಕ ಆಗಿರುವುದರ ಜೊತೆಗೆ, ದೇಶದ ಆರ್ಥಿಕತೆ ಉತ್ತಮಗೊಳ್ಳಲೂ ಸಹಕಾರಿ. ರೈತರ ಹಿತ ಗಮನದಲ್ಲಿ ಇರಿಸಿಕೊಂಡು ಸಮರ್ಪಕ ಜೈವಿಕ ಇಂಧನ ನೀತಿ ಜಾರಿಯಾದರೆ, 2070ರ ವೇಳೆಗೆ ಶೂನ್ಯ ಇಂಗಾಲ ಹೊರಸೂಸುವಿಕೆಯ ಗುರಿ ಮುಟ್ಟಬಹುದು.

ಜೈವಿಕ ಇಂಧನ ಕ್ಷೇತ್ರದಲ್ಲಿ ಮಹತ್ವದ ಸಂಶೋಧನೆಗಳು ಮತ್ತು ಪ್ರಯೋಗಗಳು ನಡೆದಿವೆ. ಪ್ರಖ್ಯಾತ ಗಾಂಧೀವಾದಿ ವಿಜ್ಞಾನಿ ಡಾ. ರಘುನಾಥ್ ಅನಂತ ಮಾಶೇಲ್ಕರ್ ಭಾರತದ ಜೈವಿಕ ಇಂಧನ ನೀತಿಗಳಿಗೆ ವೈಜ್ಞಾನಿಕ ಮತ್ತು ಸಾಮಾಜಿಕ ಆಯಾಮಗಳನ್ನು ಒದಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು. ವಿಜ್ಞಾನಿಗಳಾದ ಡಾ. ಅನಿಲ್ ಕುಮಾರ್ ಸಿನ್ಹಾ, ಡಾ. ಸಲೀಂ ಅಖ್ತರ್ ಫರೂಕಿ, ಡಾ. ನೀರಜ್ ಅತ್ರೆ, ಡಾ. ಜಯಿತಿ ತ್ರಿವೇದಿ ಮತ್ತು ಅವರ ತಂಡವು ಸೇರಿದಂತೆ ಹಲವು ವಿಜ್ಞಾನಿಗಳು, ಕೃಷಿ ತ್ಯಾಜ್ಯ ಮತ್ತು ಅಡುಗೆ ಎಣ್ಣೆಯಿಂದ ಜೈವಿಕ ಇಂಧನ ಉತ್ಪಾದಿಸುವ ವಿಧಾನಗಳ ಬಗ್ಗೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಪೆಟ್ರೋಲಿಯಂ', 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ' ಮತ್ತು ಇತರ ಸಂಸ್ಥೆಗಳಲ್ಲಿ ಕೆಲಸ ಮಾಡಿದ್ದಾರೆ.

ಜೈವಿಕ ಇಂಧನ, ತಂತ್ರಜ್ಞಾನಗಳ ಸುಧಾರಣೆ ಮತ್ತು ವಾಣಿಜ್ಯ ಬಳಕೆಗೆ ಪ್ರಮುಖ ಕೊಡುಗೆ ನೀಡಿದ್ದಾರೆ. ವಿಜ್ಞಾನಿ ಡಾ. ಎ.ಕೆ. ಸಿಂಗ್ ಅವರು ಸೆಣಬು ಮತ್ತು ಕೆನಾಫ್ (ದಾಸವಾಳ ಸೆಣಬು) ರೀತಿಯ ಬೆಳೆಗಳ ಕೃಷಿ ತ್ಯಾಜ್ಯದಿಂದ ಜೈವಿಕ ಎಥೆನಾಲ್ ಉತ್ಪಾದಿಸುವ ಸಾಧ್ಯತೆಗಳ ಕುರಿತು ಅಧ್ಯಯನ ನಡೆಸಿದ್ದಾರೆ. ಈ ಸಂಶೋಧನೆಗಳು ಯಶಸ್ವಿಯಾದರೆ ಆಹಾರ ಬೆಳೆಗಳ ಮೇಲಿನ ಒತ್ತಡ ತನ್ನಿಂತಾನೇ ಕಡಿಮೆಯಾಗುತ್ತದೆ.

ತಮಿಳುನಾಡು ಕೃಷಿ ವಿಶ್ವವಿದ್ಯಾಲಯವು ಹೊಂಗೆ, ಲಕ್ಷ್ಮೀತರು (ಸಿಮರೂಬಾ), ಕಾಸಿಗಿಡ (ಜಟ್ರೋಫಾ) ಮತ್ತು ಇತರ ಎಣ್ಣೆಬೀಜಗಳಿಂದ ತೈಲವನ್ನು ಹೊರತೆಗೆಯುವ ವಿಧಾನಗಳು, ಆ ತೈಲವನ್ನು ಜೈವಿಕ ಡೀಸೆಲ್ ಆಗಿ ಪರಿವರ್ತಿಸುವ ಪ್ರಕ್ರಿಯೆಗಳು ಮತ್ತು ಅದರ ಇಂಧನ ಗುಣಮಟ್ಟದ ಬಗ್ಗೆ ವ್ಯಾಪಕ ಸಂಶೋಧನೆ ನಡೆಸಿದೆ. ಜೈವಿಕ ಇಂಧನಗಳು ಬರೀ ಪರಿಸರಸ್ನೇಹಿ ಇಂಧನಗಳಾಗಿರದೆ, ದೇಶದ ಆರ್ಥಿಕತೆ, ರೈತರ ಜೀವನಮಟ್ಟ ಮತ್ತು ಇಂಧನ ಭದ್ರತೆಯನ್ನು ಸುಧಾರಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ವಿಶ್ವದ ಸುಸ್ಥಿರ ಭವಿಷ್ಯಕ್ಕಾಗಿ ಪರ್ಯಾಯ ಇಂಧನದ ರೂಪದಲ್ಲಿ ಜೈವಿಕ ಇಂಧನ ಸಿಕ್ಕಿದೆ. ರೈತರ ಹಿತ ಕಡೆಗಣಿಸದೆ ತಂತ್ರಜ್ಞಾನ ಹಾಗೂ ನೀತಿಗಳ ಸಮರ್ಥ ಅನುಷ್ಠಾನದಿಂದ ಜೈವಿಕ ಇಂಧನಗಳನ್ನು ಭವಿಷ್ಯದ ಇಂಧನ ಮೂಲವನ್ನಾಗಿ ಮಾಡಬಹುದು.



Prajavani Pg 10